ದಿನಾಂಕಃ 14.06.2022
ಓ.ಎಸ್ ಃ 59/2019
ಪಿ ಡಬ್ಲ್ಯೂ ಃ 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಪಿ.ಆರ್. ರವರಿಂದ ಃ

ನಾನು ವ್ಯವಸಾಯ ಮಾಡುತ್ತೇನೆ ಮತ್ತು ಕಾಂಟ್ರಾಕ್ಟ ಕೆಲಸ ಮಾಡುತ್ತೇನೆ. ಕಾಂಟ್ರಾಕ್ಟ ಕೆಲಸ ಸುಮಾರು 15 ವರ್ಷದಿಂದ ಮಾಡುತ್ತಿದ್ದೇನೆ. ಕಾಂಟ್ರಾಕ್ಟ ಕೆಲಸಕ್ಕೆ ಹಣದ ಅವಶ್ಯಕತೆ ಹೆಚ್ಚು ಇರುತ್ತದೆ ಎಂದರೆ ಸಾಕ್ಷಿಯು ಯಾರು ಕೆಲಸ ಕೊಡುತ್ತಾರೋ ಅವರೇ ಹಣ ಹೊಂದಿಸುತ್ತಾರೆ ಎಂದು ನುಡಿಯುತ್ತಾರೆ. ಕೆಲವೊಂದು ಕಾಂಟ್ರಾಕ್ಟ ಕೆಲಸ ಮಾಡುವಾಗ ಕೆಲಸ ಮಾಡಿದ್ದಕ್ಕೆ ಹಣ 1-2 ವರ್ಷ ತಡವಾಗಿ ಬರುತ್ತದೆ ಎಂದರೆ ಸರಿಯಲ್ಲ. ವಾರ್ಷಿಕವಾಗಿ ನಾನು ಎಷ್ಟು ಆದಾಯ ಪಡೆಯುತ್ತೇನೆ ಎಂದರೆ ಸಾಕ್ಷಿಯು 3-4 ಲಕ್ಷ ರೂ. ಆದಾಯ ಬರುತ್ತದೆ ಎಂದು ನುಡಿಯುತ್ತಾರೆ. ನಾನು ಆದಾಯ ತೆರಿಗೆ ಪಾವತಿದಾರರ ಎಂದರೆ ಕಾಂಟ್ರಾಕ್ಟ ಕೆಲಸ ಮಾಡುತ್ತಿದ್ದಾಗಿನಿಂದ ಆದಾಯ ತೆರಿಗೆ ಪಾವತಿ ಮಾಡುತ್ತಿದ್ದೇನೆ.

ಮೃತ ಪ್ರಕಾಶ್ ರವರು ನಮ್ಮ ಊರಿನವರಾದ ಕಾರಣ ಅವರು ನನಗೆ ಗೊತ್ತಿರುತ್ತದೆ. ಮೃತ ಪ್ರಕಾಶ್ ರವರು ಶಾಮಿಯಾನ ಇಟ್ಟಿದ್ದರು ಮತ್ತು ಬಾರ್ ನ್ನು ಪರವಾನಿಗೆ ಪಡೆದು ನಡೆಸುತ್ತಿದ್ದರು. ಮೃತ ಪ್ರಕಾಶ್ ರವರು 15-20 ವರ್ಷದಿಂದ ಬಾರ್ ನ್ನು ಪಡೆದುಕೊಂಡು ನಡೆಸುತ್ತಿದ್ದರು. ಮೃತ ಪ್ರಕಾಶ್ ರವರಿಗೆ ತುಂಬಾ ಆದಾಯ ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ ಸಾಕ್ಷಿಯು ಮುಂದುವರೆದು ಶಾಮಿಯಾನ ಮತ್ತು ಬಾರ್ ನಿಂದ ಸ್ವಲ್ಪ ನಷ್ಟ ಆಗುತ್ತಿತ್ತು ಎಂದು ನುಡಿಯುತ್ತಾರೆ. ಸಾಮನ್ಯವಾಗಿ ಶಾಮಿಯಾನ ಮತ್ತು ಬಾರ್ ನಿಂದ ಯಾವುದೇ ನಷ್ಟವಾಗುವುದಿಲ್ಲ ಎಂದರೆ ಸರಿಯಲ್ಲ. ಶಾಮಿಯಾನ ಮತ್ತು ಬಾರ್ ನಿಂದ ಯಾವ ರೀತಿ ನಷ್ಟವಾಗುತ್ತದೆ ಎಂದರೆ ಸಾಕ್ಷಿಯು ಮೃತ ಪ್ರಕಾಶ್ ರವರು ನಷ್ಟವಾಗಿರುತ್ತದೆ ಎಂದು ಹೇಳುತ್ತಿದ್ದರು ಆಗಾಗಿ ಹೇಳುತ್ತಿದ್ದೇನೆ.

ದಿಃ 08.10.2016 ರಂದು ನಾನು ಮೃತ ಪ್ರಕಾಶ್ ರವರಿಗೆ 4 ಲಕ್ಷ ರೂ. ಹಣವನ್ನು ಕೊಟ್ಟಿರುತ್ತೇನೆ. ಸಾಕ್ಷಿಯು ಪುನಃ ಅದು ದಿಃ 10.08.2016 4-5 ವರ್ಷ ಆಗಿದ್ದ ಕಾರಣ ದಿನಾಂಕ ಮೊದಲು ನೆನಪಾಗಲಿಲ್ಲ ಎಂದು ನುಡಿಯುತ್ತಾರೆ. ಆ ದಿನ ಮೃತ ಪ್ರಕಾಶ್

ರವರು ಬೆ. 8.00 ಗಂಟೆಗೆ ಊರಿನಲ್ಲಿ ನನ್ನನ್ನು ಭೇಟಿಯಾಗಿರುತ್ತಾರೆ. ಆ ದಿನ ಅವರು ಶಿವಣ್ಣ ಮತ್ತು ವಿ. ಅಲೋಕ್ ಎನ್ನುವವರನ್ನು ಕರೆದುಕೊಂಡು ಬಂದಿದ್ದರು. 8-10 ದಿನಗಳ ಹಿಂದೆ ಕೊಪ್ಪದಲ್ಲಿ ನನ್ನನ್ನು ಭೇಟಿ ಮಾಡಿ ಹಣ ಬೇಕು ಎಂದು ಹೇಳಿದ್ದು, ಆ ದಿನ ಬಂದು ಹಣ ತೆಗೆದುಕೊಂಡಿರುತ್ತಾರೆ. ಮೃತ ಪ್ರಕಾಶ್ ರವರು ತಮ್ಮ ವ್ಯವಹಾರದಲ್ಲಿ ನಷ್ಟವಾಗಿದ್ದು, ಮಕ್ಕಳ ವಿದ್ಯಾಭ್ಯಾಸಕ್ಕೆ ಹಣ ಬೇಕು ಎಂದು ಕೇಳಿ ಪಡೆದುಕೊಂಡಿರುತ್ತಾರೆ. ಹಣವನ್ನು ನಾನು ನಗದಾಗಿ ಕೊಟ್ಟಿರುತ್ತೇನೆ. ಸದರಿ ಹಣವನ್ನು ನನ್ನ ಬಳಿಯೇ ವ್ಯವಸಾಯದಿಂದ ಬಂದ ಹಣ ಇತ್ತು. ನಾನು ಸಾಲ ಕೊಟ್ಟಿರುವ ಬಗ್ಗೆ ನನ್ನ ಆದಾಯ ತೆರಿಗೆ ಪಾವತಿಯಲ್ಲಿ ತೋರಿಸಿರುವುದಿಲ್ಲ. ಆದಾಯ ತೆರಿಗೆ ಪಾವತಿ ಮಾಡುವಾಗ ಎಲ್ಲಾ ಖರ್ಚು ವೆಚ್ಚವನ್ನು ನಮೂದು ಮಾಡುತ್ತೇವೆ ಎಂದರೆ ಸಾಕ್ಷಿಯು ಕಾಂಟ್ರಾಕ್ಟ್ ಕೆಲಸದ ಬಗ್ಗೆ ಮಾತ್ರ ತೋರಿಸುತ್ತೆನೆ, ವ್ಯವಸಾಯದ ಬಗ್ಗೆ ಉಲ್ಲೇಖ ಮಾಡುವುದಿಲ್ಲ ಎಂದು ನುಡಿಯುತ್ತಾರೆ.

ಪ್ರತಿವಾದಿಗಳಿಗೆ ದಿಃ04.12.2018 ರಂದು ವಕೀಲರ ಮೂಲಕ ನೋಟಿಸು ಕೊಟ್ಟಿರುತ್ತೇನೆ. ಸದರಿ ನೋಟಿಸು ಕೊಡುವಾಗ ಏನೆಂದು ಉಲ್ಲೇಖ ಮಾಡಿ ಕೊಟ್ಟಿರುತ್ತೇನೆ ಎಂದರೆ ಸಾಕ್ಷಿಯು ಮೃತ ಪ್ರಕಾಶ್ ರವರು ಸಾಲವನ್ನು ಪಡೆದುಕೊಂಡಿದ್ದು ಅದನ್ನು ವಾಪಸ್ಸು ಕೊಡಬೇಕೆಂದು ಉಲ್ಲೇಖ ಮಾಡಿ ನೋಟಿಸು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಇದನ್ನು ಹೊರತು ಪಡಿಸಿ ಬೇರೆ ಹೇಳಿರುತ್ತೆನಾ ಎಂದರೆ ಸಾಕ್ಷಿಯು 4 ಲಕ್ಷ ಹಣ ಮತ್ತು ಬಡ್ಡಿ ಕೊಡಬೇಕೆಂದು ಉಲ್ಲೇಖ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

ಈ ದಾವೆಯಲ್ಲದೇ ಅಸಲು ದಾವೆ ನಂಃ 302/2017 ಮತ್ತು ಅಸಲು ದಾವೆ 502/2018 ನ್ನು ಕೆ.ಎಸ್. ಶಂಕರ ಮತ್ತು ಎಸ್. ಕೃಷ್ಣ ರವರ ಮುಖಾಂತರ ದಾವೆ ಯನ್ನು ಪ್ರತಿವಾದಿಗಳ ವಿರುದ್ಧ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ನನಗೂ ಅದಕ್ಕು ಸಂಬಂಧ ಇರುವುದಿಲ್ಲ ಎಂದು ನುಡಿಯುತ್ತಾರೆ. ದಿಃ 03.01.2017 ರಲ್ಲಿ ಪ್ರಕಾಶ್ ರವರು ತೀರಿಕೊಂಡಿರುತ್ತಾರೆ. ಪ್ರಕಾಶ್ ರವರು ತೀರಿಕೊಳ್ಳುವ 10 ತಿಂಗಳ ಹಿಂದೆ ಹಣ ಬೇಕು ಎಂದು ನನ್ನನ್ನು ಕೇಳಿ ತೆಗೆದುಕೊಂಡಿರುತ್ತಾರೆ. ಪ್ರಕಾಶ್ ರವರು ನನ್ನನ್ನು ಹಣ ಕೇಳುತ್ತಾರೆ ಅವರ ಹೆಂಡತಿ ಅಥವಾ ಅವರ ತಂದೆ ತಾಯಿಗೆ ವಿಚಾರವನ್ನು ತಿಳಿಸಿರುತ್ತೀರಾ ಎಂದರೆ ಸಾಕ್ಷಿಯು ಮೃತ ಪ್ರಕಾಶ್‌ರವರ ಚಿಕ್ಕಪ್ಪನವರಾದ ಕೃಷ್ಣೇಗೌಡರವರಿಗೆ ತಿಳಿಸಿರುತ್ತೇನೆ ಎಂದು ನುಡಿಯುತ್ತಾರೆ.

ನಾನು ಪ್ರಕಾಶ್ ರವರಿಗೆ ನಾನು ಬೆ. 9.30 ರಿಂದ 10.00 ಗಂಟೆಯ ಒಳಗೆ ತಾಲ್ಲೂಕು ಕಛೇರಿಯ ಬಳಿ ಹಣವನ್ನು ಕೊಟ್ಟಿರುತ್ತೇನೆ. ಪ್ರೊನೋಟ್ ನ್ನು ರಾಜಶೇಖರ್ ರವರು ಬರೆದಿರುತ್ತಾರೆ. ನಿಪಿ 1 ರಲ್ಲಿ ಇರುವ ಪ್ರಕಾಶ್ ರವರ ಸಹಿ ಬೇರೆ ಬೇರೆ ಥರ ಇದೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಯಾವುದೇ ಕರಾರನ್ನು ಮಾಡಬೇಕಾದರೆ ಸಹಿ ಮತ್ತು ಹೆಬ್ಬೆಟ್ಟಿನ ಗುರುತು ತೆಗೆದುಕೊಳ್ಳುತ್ತಾರೆ ಎಂದರೆ ಸಾಕ್ಷಿಯು ಪತ್ರಬರಹಗಾರರು ಸಹಿಮಾತ್ರ ಸಾಕು ಎಂದು ಹೇಳಿದ್ದು ಹೆಬ್ಬೆಟ್ಟಿನ ಗುರುತನ್ನು ಪಡೆದುಕೊಂಡಿರುವುದಿಲ್ಲ. ನಿಪಿ 1 ರಲ್ಲಿರುವ ಪ್ರಕಾಶ್ ಎಂದು ಇರುವ ಸಹಿ ಮೃತ ಪ್ರಕಾಶ್ ರವರದ್ದು ಅಲ್ಲ ಎಂದರೆ ಸರಿಯಲ್ಲ. ಸದರಿ ಸಹಿಯನ್ನು ತಜ್ಞರ ಬಳಿ ಪರೀಕ್ಷೆ ಮಾಡಲು ಅಭ್ಯಂತರ ಇದೆಯಾ ಎಂದರೆ ನನಗೆ ಅಭ್ಯಂತರ ಇರುವುದಿಲ್ಲ. ಆ ದಿನ 9.30 ರಿಂದ 10.00 ಗಂಟೆಯ ಒಳಗೆ ನಿಪಿ 1 ದಾಖಲೆಯನ್ನು ತಯಾರು ಮಾಡಲಾಯಿತು. ನಾನು ಮೃತ ಪ್ರಕಾಶ್ ರವರಿಗೆ 500 ರೂ. ಮುಖಬೆಲೆಯ ಒಟ್ಟು 4 ಲಕ್ಷ ರೂ.ಹಣವನ್ನು ಕೊಟ್ಟಿರುತ್ತೇನೆ. 500 ರೂ. ಮುಖಬೆಲೆಯ 4 ಲಕ್ಷ ರೂ. ಹಣವನ್ನು ಎಣಿಕೆ ಮಾಡಲು ಅರ್ಧ ಗಂಟೆಯಿಂದ 1 ಗಂಟೆ ಬೇಕಾಗುತ್ತದೆ ಎಂದರೆ ಸರಿಯಲ್ಲ.

ನಾನು ನೀಡಿದ ನೋಟಿಸಿನಲ್ಲಿ ಪ್ರಕಾಶ್ ರವರು ಕೊಪ್ಪದಲ್ಲಿ ನಿವೇಶನ ಖರೀದಿ ಮಾಡಲು ಮತ್ತು ಮನೆ ಕಟ್ಟಲು ಹಣ ಬೇಕು ಎಂದು ಸಾಲ ಪಡೆದುಕೊಂಡರುತ್ತಾರೆ ಎಂದು ಉಲ್ಲೇಖ ಮಾಡಿರುತ್ತೇನೆ ಎಂದರೆ ನೆನಪಿರುವುದಿಲ್ಲ. ಕೊಪ್ಪದಲ್ಲಿ ಮೃತ ಪ್ರಕಾಶ್ ರವರು ಯಾವ ವರ್ಷದಲ್ಲಿ ಮನೆ ಕಟ್ಟಿರುತ್ತಾರೆ ಎಂದರೆ ಸಾಕ್ಷಿಯು ಯಾವಾಗ ಕಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಆದರೆ ಮನೆ ಕಟ್ಟುವ ಸಾಲ ತೀರಿಸಲು ಹಣ ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಮತ್ತು ಮೃತ ಪ್ರಕಾಶ್ ಒಂದೇ ಊರಿನವರಾದ ಕಾರಣ ತುಂಬಾ ವರ್ಷದಿಂದ ಪರಿಚಯ ಇರುತ್ತಾರೆ. ಸಾಮಾನ್ಯವಾಗಿ ಊರಿನವರು ಮನೆ ಕಟ್ಟಿದರೆ ಎಲ್ಲರನ್ನು ಗೃಹಪ್ರವೇಶಕ್ಕೆ ಕರೆಯುತ್ತಾರೆ ಎಂದರೆ ಸಾಕ್ಷಿಯು ಅವರು ಕೊಪ್ಪದಲ್ಲಿ ಮನೆ ಕಟ್ಟಿದ್ದು ನನ್ನನ್ನು ಕರೆದಿರುವುದಿಲ್ಲ ಎಂದು ನುಡಿಯುತ್ತಾರೆ.

ಮೃತ ಪ್ರಕಾಶ್ ರವರು ತೀರಿಕೊಂಡ 10-15 ದಿನಗಳ ನಂತರ ನಾನು ಪ್ರತಿವಾದಿಗಳನ್ನು ಭೇಟಿ ಮಾಡಿ ಹಣ ಕೊಡಬೇಕು ಎಂದು ಕೇಳಿರುತ್ತೇನೆ. ಮೃತ ಪ್ರಕಾಶ್ ರವರ ಅಪ್ಪ ಅಮ್ಮ ಮೊದಲೇ ತೀರಿಕೊಂಡಿರುತ್ತಾರೆ. ನಾನು ಮತ್ತು ಮೃತ ಪ್ರಕಾಶ್ ರವರು ತುಂಬಾ ಆತ್ಮೀಯರಾಗಿದ್ದು ನಾನು ಚುನಾವಣೆಯ ಸಮಯದಲ್ಲಿ ಸ್ಪರ್ಧಿಸಿದ್ದು, ಆಗ ಪ್ರಕಾಶ್ ರವರ ಬಾರ್ ನಿಂದ ಮದ್ಯವನ್ನು ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು 2 ಭಾರಿ

ಅಂದರೆ 2005 ಮತ್ತು 2010 ರಲ್ಲಿ ಚುನಾವಣೆಗೆ ಸ್ಪರ್ಧಿಸಿರುತ್ತೇನೆ. ನಾನು 2 ಭಾರಿ ಚುನವಣೆಯಲ್ಲಿ ಸ್ಪರ್ಧಿಸಿದ್ದಾಗ ಪ್ರಕಾಶ್ ರವರ ಬಾರ್ನಿಂದ ಮದ್ಯವನ್ನು ಖರೀದಿ ಮಾಡಿದ್ದು ನಾನೇ ಅವರಿಗೆ ಹಣವನ್ನು ಕೊಡಬೇಕಾಗಿರುತ್ತದೆ ಎಂದರೆ ಸರಿಯಲ್ಲ. ಪ್ರಕಾಶ್ ರವರು ಆರ್ಥಿಕವಾಗಿ ತುಂಬಾ ಸದೃಢವಾಗಿದ್ದು ಅವರಿಗೆ ಯಾವುದೇ ಹಣದ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ 1 ರಲ್ಲಿರುವ ಸಾಕ್ಷಿದಾರರು ನನಗೆ ಪರಿಚಯ ಇರುತ್ತಾರೆ. ಅವರಿಬ್ಬರೂ ಶಾಮಿಯಾನ ನಡೆಸುತ್ತಿದ್ದು ಅವರುಗಳನ್ನು ಪ್ರಕಾಶ್ ರವರೇ ಕರೆದುಕೊಂಡು ಬಂದಿದ್ದರು ಎಂದು ನುಡಿಯುತ್ತಾರೆ. ನಿಪಿ 1 ಕ್ಕೆ ಪ್ರಕಾಶ್ ರವರ ಸಹಿಯನ್ನು ಸೃಷ್ಟಿ ಮಾಡಿ ಅವರ ವಾರಸುದಾರಿಗೆ ತೊಂದರೆ ಕೊಡುವ ಉದ್ದೇಶದಿಂದ ಸಾಕ್ಷಿದಾರರ ಜೊತೆ ಶಾಮೀಲಾಗಿ ದಾಖಲೆಯನ್ನು ಸೃಷ್ಟಿ ಮಾಡಿ, ಸುಳ್ಳು ದಾವೆ ಹಾಕಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.